ಮಿತ್ರರೊಬ್ಬರು ಅ.ನ.ಕೃ. ಅವರ ಆರೋಗ್ಯ ಚೆನ್ನಾಗಿಲ್ಲ ಎಂಬ ವಾರ್ತೆ ತಿಳಿಸಿದರು. ಕೂಡಲೇ ಬೆಂಗಳೂರಿಗೆ ಹೋಗಿ ಅವರನ್ನು ಕಂಡೆವು. ಅದೇ ನಮ್ಮ ಅವರ ಕೊನೆಯ ಭೇಟಿಯಾಯಿತು. ಆ ದಿನ ಅ.ನ.ಕೃ. ಆಗ ತಾನೇ ಕಾಯಿಲೆಯಿಂದ ಮಲಗಿ ಮೇಲೆದ್ದಿದ್ದ ಯಜಮಾನರಿಗೆ, 'ಏನೋ ಸುಬ್ಬು, ನನಗಿಂತ ಮುಂದೆ ಹೊರಡಬೇಕೂಂತ ಟಿಕೆಟ್ ತಗೊಂಡಿದ್ಯಂತಲ್ಲ. ಕ್ರಮ ವಿಪರ್ಯಾಸ ಮಾಡ್ತಾರೇನೋ... ಕೂಡದು ಕೂಡದು, ಹುಷಾರ್' ಎಂದು ತಮಾಷೆ ಮಾಡಿದ್ದರು.

ಸಹಜ ಸರಸಿಗಳಾಗಿದ್ದ ಅ.ನ.ಕೃ. ತಮ್ಮ ನೋವಿನಲ್ಲೂ ಹಾಗೆ ತಮಾಷೆ ಮಾಡಿದ್ದನ್ನು ಕೇಳಿ ನಮಗಂತೂ ಆ ದಿನ ತುಂಬಾ ಸಂಕಟವಾಯಿತು.

ಒಮ್ಮೆ ಕೃಷ್ಣರಾಯರು ತಮ್ಮ ಹೆಂಡತಿ ವಿಶಾಲಕ್ಕನವರೊಂದಿಗೆ ನಮ್ಮ ಮನೆಗೆ ಬಂದಿದ್ದಾಗ ಯಜಮಾನರು ಹೇಳಿದ್ದರು:

'ಕಿಟ್ಟಣ್ಣ, ನಿಮ್ಮ ಬೆಂಗಳೂರು ಸಹವಾಸ ಬಿಟ್ಟು ಹಾಯಾಗಿ ಇಲ್ಲಿ ಇರಿ. ಅಲ್ಲಿ ಜನಗಳ ಮಧ್ಯೆ ರೆಸ್ಟ್ ಎಲ್ಲಿ ಸಿಗುತ್ತೆ?'

'ನನಗೂ ಹಾಗೇ ಅನ್ನಿಸಿದೆ ಸುಬ್ಬು... ಎಲ್ಲಿಯಾದರೂ ಹೋಗಿ ರೆಸ್ಟ್ ತಗೋಬೇಕು' ಎಂದರು ಅ.ನ.ಕೃ.

'ಎಲ್ಲಿ ಯಾಕೆ, ಇಲ್ಲೇ ಬಂದಿರಿ... ನಾವು ಗಂಡ–ಹೆಂಡತಿ, ಮಕ್ಕಳು ಕೆಳಗಿನ ಮನೇಲಿದ್ದೀವಿ. ಈ ಮನೆ ನಿಮ್ಮದೇಂತ ತಿಳಿದುಕೊಂಡು ಹಾಯಾಗಿ ಇಲ್ಲಿರಿ' ಎಂದಿದ್ದೆವು.

'ಬತ್ತೀನಿ ಸುಬ್ಬು... ಖಂಡಿತ ಬರ್ತೀನಿ' ಎಂದು ಹೇಳಿದ್ದರು ಅ.ನ.ಕೃ.

8.7.1971ನೇ ಗುರುವಾರ ಆಷಾಢ ಶುಕ್ಲ ಪೌರ್ಣಿಮೆಯ ರಾತ್ರಿ 10.30ರ ವೇಳೆಗೆ ಅ.ನ.ಕೃ. ಸಂಧ್ಯಾರಾಗ ಹಾಡಿದರು.

ಯಜಮಾನರು ತೀವ್ರ ಶೋಕಕ್ಕೊಳಗಾದರು. ತಮ್ಮ ಹಿರಿಯಣ್ಣ ಅ.ನ.ಕೃ ಅವರ ಅಂತಿಮದರ್ಶನ ಮಾಡಲೂ ಆಗ ಅವರನ್ನು ಕಾಡುತ್ತಿದ್ದ ಹರ್ಪಿಸ್ ವ್ಯಾಧಿ ಅವಕಾಶ ಕೊಡಲಿಲ್ಲ. ಮೈಸೂರಿನ ಕನ್ನಡ ಪಕ್ಷದ ಹುಡುಗರೊಂದಿಗೆ ಹೊರಡಲು ಸಿದ್ಧವಾದರು. ಯಜಮಾನರ ಮನಸ್ಥಿತಿ ತಿಳಿದಿದ್ದ ನಾನು ಬೇಡ ಎಂದು ಹೇಗೆ ಹೇಳಲಿ? ನನಗೆ ಅ.ನ.ಕೃ. ತೀರಿಹೋದ ವ್ಯಥೆಯ ಜೊತೆಗೆ ಇವರ ಕತೆ ಹೇಗೋ ಎಂಬ ಚಿಂತೆ. ಆ ವೇಳೆಗೆ ಬಂದ ಶಿಷ್ಯ ನಾ. ಪ್ರಭಾಕರ್, ರಾಯರ ಅವಸ್ಥೆ ನೋಡಿ, 'ನೀವು ರೆಸ್ಟ್ ತೆಗೆದುಕೊಳ್ಳಿ. ಹೋದವರಂತೂ ಹಿಂತಿರುಗಿ ಬರೋಲ್ಲ. ನಿಮ್ಮನ್ನು ಈ ಸ್ಥಿತಿಯಲ್ಲಿ ಕಳೆದುಕೊಂಡು ನಾವೆಲ್ಲಿ ಹೋಗೋಣ? ನಿಮ್ಮ ಕೈಮುಟ್ಟಿ ಒಂದು ಹೂವಿನ ಹಾರ ಕೊಡಿ. ನಿಮ್ಮ ಪರವಾಗಿ ಹಾಕಿ ಬರುತ್ತೇನೆ' ಎಂದು ಹೇಳಿ ಅವರ ಮನವೊಲಿಸಿದ.

ಹೂವಿನ ಹಾರ ಮುಟ್ಟಿ ಕೊಟ್ಟರು. ನಾ. ಪ್ರಭಾಕರ್ ಮತ್ತು ಕನ್ನಡ ಪಕ್ಷದ ಹುಡುಗರು ಬೆಂಗಳೂರಿಗೆ ಹೊರಟರು. ಆಕಾಶವಾಣಿಯಿಂದ ಎ.ಎಸ್. ಮೂರ್ತಿಯವರು ಶೋಕ ಸಂದೇಶ ಪಡೆಯಲು ಬಂದರು. ಆ ನೋವಿನಲ್ಲೇ ಅಳುತ್ತಾ ರಾಯರು ತಮ್ಮ ಹಾಗೂ ಅ.ನ.ಕೃ. ಅವರ ಸ್ನೇಹವನ್ನು ನೆನಪಿಸಿಕೊಂಡರು. ತಮ್ಮ ಆತ್ಮದ ಆತ್ಮ, ಕಣ್ಣಿನ ಕಣ್ಣು, ಲೇಖನಿಯ ಜೀವಶಕ್ತಿ ಅ.ನ.ಕೃ. ಎಂದು ಹೇಳಿ, ಆ ಜೀವಶಕ್ತಿಯನ್ನು ಕಳೆದುಕೊಂಡ ತಮ್ಮ ಬದುಕು ಬರಡು ಎಂದರು. ಆ ಮಾತು ತ.ರಾ.ಸು. ಶೋಕದ ಭರದಲ್ಲಿ ಹೇಳಿದ ಸಂದೇಶವಾಗಿರಲಿಲ್ಲ.

ಮುಂದೆ ಹದಿಮೂರು ವರ್ಷ ಕಾಲ ಬದುಕಿದ್ದ ರಾಯರ ಜೀವನದಲ್ಲಿ ಅ.ನ.ಕೃ. ಅವರನ್ನು ಕಳೆದುಕೊಂಡ ವ್ಯಥೆ, ಆ ಮಟ್ಟಿಗೆ ಅವರ ಜೀವನವನ್ನು ಬರಡಾಗಿಸಿತ್ತು. ಅ.ನ.ಕೃ. ಅವರ ನೆನಪಿಗೇ ತ.ರಾ.ಸು. ಹನಿಗಣ್ಣಾಗುತ್ತಿದ್ದರು. ಈಗಲೂ ಅ.ನ.ಕೃ. ಅವರ ನೆನಪಾದಾಗಲೆಲ್ಲಾ ಅವರನ್ನು ಕಿತ್ತುತಿನ್ನುತ್ತಿದ್ದ ಕೊಳಕು ಶಿಷ್ಯರ ಪರಿಸರದಿಂದ ಸ್ವಲ್ಪ ಕಾಲವಾದರೂ ಹೊರಬಂದು ನಮ್ಮ ಮನೆಯಲ್ಲಿದ್ದಿದ್ದರೆ ಅವರ ಆರೋಗ್ಯ ಸುಧಾರಿಸುತ್ತಿತ್ತೇನೋ, ಇನ್ನಷ್ಟು ಕಾಲ ಇರುತ್ತಿದ್ದರೇನೋ ಎನಿಸುತ್ತದೆ.

ಈಗ ಇಬ್ಬರು ರಾಯರೂ ಹೋಗಿ, ನನ್ನ ಅನಿಸಿಕೆಗಳು ಕೇವಲ ಅನಿಸಿಕೆಗಳೇ ಆದ ವ್ಯಥೆ ಮಾತ್ರ ಉಳಿದಿದೆ.

ಸೌಜನ್ಯ: ಶಾ.ಮಂ. ಕೃಷ್ಣರಾಯ ಸಂಪಾದಿಸಿರುವ 'ಅದಮ್ಯ ಚೇತನ' (ಅ.ನ.ಕೃ. ಬದುಕು–ಬರಹ);
ಪ್ರ: ಹೇಮಂತ ಸಾಹಿತ್ಯ, ಬೆಂಗಳೂರು.